ತುಂಬಿಕೊಳ್ಳುವಂತಿದ್ದ ಚಲುವೆ ಹೇಗೆ ಮಣ್ಣಿನೊಳಗೆ ಬಿದ್ದ ಹೆಂಟೆಯಂತೆ ಕರಗಿ ಹೋಗುತ್ತಿದ್ದಾಳೆ ಎಂದು ಅವಳನ್ನು ನೋಡಿದಾಗಲೆಲ್ಲಾ ಸಾಲಿಹಾ ತನ್ನ ಬಸಿರಿಗೆ ಕೊಳ್ಳಿ ಇಟ್ಟಂತೆ ಮಿಡುಕುತ್ತಿದ್ದಳು. ಅವಳನ್ನು ಕಂಡ ವೈದ್ಯರು ಹೇಳಿದರು: "ಅವಳಿಗೆ ಯಾವುದೋ ತೀವ್ರವಾದ ಆಘಾತವಾಗಿದೆ. ಆ ಆಘಾತದಿಂದ ಅವಳು ಹೊರಬಂದಾಗ ಮಾತ್ರ ನಾರ್ಮಲ್ಲಾಗಿ ಇರಲು ಸಾಧ್ಯ." ಅವಳು ಆ ಕ್ಷೋಭೆಯಿಂದ ಹೊರ ಬರುವ ಸಲುವಾಗಿ ಕೆಲವು ಔಷಧಿಗಳನ್ನು ಪ್ರಿಸ್‌ಕ್ರೈಬ್ ಮಾಡಿದರು. ಆಕೆ ದ್ರವ ರೂಪದ ಔಷಧಿಗಳನ್ನು ಕುಡಿಯಲೇ ಇಲ್ಲ. ಬಾಯಿಗೆ ಹಾಕಿದ ಕೂಡಲೇ ಪಿಚಕಾರಿಯಿಂದ ನೀರು ಹಾಯಿಸಿದಂತೆ ಗೋಡೆ ಮತ್ತು ನೆಲದ ಮೇಲೆಲ್ಲಾ ಚಿತ್ತಾರ ಮೂಡಿಸುತ್ತಿದ್ದಳು. ಗುಳಿಗೆಗಳನ್ನು ಮಾತ್ರ ಬಹಳ ವಿಧೇಯತೆಯಿಂದ ತಾಯಿಯ ಕೈಯಿಂದ ಇಸಿದುಕೊಳ್ಳುತ್ತಿದ್ದಳು. ಒಂದು ವಾರದ ನಂತರ ಅವಳ ಮಂಚವನ್ನು ಸರಿಸಿ ಗುಡಿಸಿದಾಗ ಲೆಕ್ಕತಪ್ಪದಂತೆ ಒಂದು ವಾರದ ಗುಳಿಗೆಗಳು ಮಂಚದ ಕೆಳಗೆ ಬಿದ್ದಿದ್ದನ್ನು ಕಂಡು ಸಾಲಿಹಾಳ ಕಣ್ಣುಗಳು ತುಂಬಿ ಬಂದವು. ತನ್ನ ಕೈಯಾರೆ ಅವಳ ಬಾಯಿಗೆ ಇಟ್ಟು ಗುಳಿಗೆಗಳನ್ನು ನುಂಗಿಸಲು ಹೋದಾಗ ಅವಳು ಅಚಾನಕವಾಗಿ 'ಥೂ' ಎಂದು ಆ ಗುಳಿಗೆಗಳನ್ನು ಥೂತ್ಕಾರದೊಂದಿಗೆ ಉಗುಳಿದಳು. ಸಾಲಿಹಾಳ ಮುಖ ಮೋರೆ ಬಟ್ಟೆಗಳೆಲ್ಲ ಅವಳ ಎಂಜಲಿನಿಂದ ಆವೃತ್ತವಾದವು. ಬಲವಂತ ಮಾಡಲು ಸಾಲಿಹಾ ಪ್ರಯತ್ನ ಪಡಲೇ ಇಲ್ಲ. ಯಾಕೆಂದರೆ ಸಾಲಿಹಾಳ ಶಕ್ತಿಗಿಂತ ಹತ್ತು ಪಟ್ಟು ಶಕ್ತಿ ಪ್ರದರ್ಶನವನ್ನು ಮಾಡಿ ತಾಯಿಯನ್ನು ಕೆಳಗಡೆ ಬೀಳಿಸಿಬಿಟ್ಟಳು. ಸಾಲಿಹಾ ಮಾತ್ರ ಕಾಡಿ ಬೇಡಿ ಪುಸಲಾಯಿಸಿ ಅವಳಿಗೆ ಒಂದೊಂದು ಗುಳಿಗೆಯನ್ನು ನುಂಗಿಸಲು ಸಾಧ್ಯವಾಗುತ್ತಿತ್ತು. ಅಂತೂ ಔಷಧೋಪಚಾರ ಸೂಕ್ತವಾಗಿ ಸಾಗುತ್ತಿಲ್ಲ ಎಂದೆನಿಸಿದಾಗ ಸಾಲಿಹಾ ಗುಟ್ಟಾಗಿ ಅನೇಕ ದರ್ಗಾಗಳನ್ನು ಸುತ್ತಿ ಹರಕೆ ಕಟ್ಟಿದಳು. ಆ ಮೂಲಕ ಪರಿಚಯವಾದ ಮಂತ್ರವಾದಿಗಳನ್ನು ಕಂಡಳು.

ಬಾಬಾ ರಿಯಾಜುದ್ದೀನ್ ಎಂಬ ಹೆಸರಿನ ಆ ವ್ಯಕ್ತಿ ಮೆಹೆಕ್‌ಳ ಮೇಲೆ 'ಪರಿಯ ಸಾಯ'ವಾಗಿದೆ (ಯಕ್ಷಿಣಿಯ ನೆರಳು ಬಿದ್ದಿದೆ). ಅವಳಿಗೆ ಈ ಜನ್ಮದಲ್ಲಿ ಮದುವೆ ಸಾಧ್ಯವಿಲ್ಲ' ಎಂದಾಗ ಅವಳು ಕುಸಿದು ಕುಳಿತಳು. ಆಗ ಮದುವೆಯನ್ನು ಸಾಧ್ಯವಾಗಿಸುವ ಪ್ರಕ್ರಿಯೆಗಾಗಿ ಐವತ್ತು ಸಾವಿರ ರೂಪಾಯಿಗಳನ್ನು ಅವಳು ಯಾರಿಗೂ ತಿಳಿಸದಂತೆ ಚೆಲ್ಲಿದಳು. ಆದರೂ ಅವಳ ಪರಿಸ್ಥಿತಿ ಸುಧಾರಣೆಯಾಗಲಿಲ್ಲ. ಕೊನೆಗೆ ಇನ್ನೊಬ್ಬ ಅತೀಂದ್ರಿಯ ವೈದ್ಯನನ್ನು ಕಂಡಾಗ ಅವಳ ಮೈ ಮೇಲೆ ಅತೀ ಕಠಿಣವಾದ ದೆವ್ವವೊಂದು ಆವಾಹನೆ ಮಾಡಿದೆ ಎಂಬ ಮಾತನ್ನು ಹೇಳಿದ. ಮಗಳನ್ನು ಗುಣ ಪಡಿಸಲೇ ಬೇಕೆಂದು ಹಟತೊಟ್ಟ ಸಾಲಿಹಾಳಿಗೆ ಇತ್ತೀಚೆಗೆ ಒಂದು ಆಲೋಚನೆ ಕಾಡತೊಡಗಿತು.

'ಹೇಗಾದರೂ ಮಾಡಿ ತಾನೇ ಆಮೀನಬೀಯ ಮನೆಗೆ ಹೋಗಿ ಅವಳು ಸೆರಗೊಡ್ಡಿ ಬೇಡಿಕೊಂಡಂತೆ ತಾನೂ ಕೂಡ ಬೇಡಿಕೊಂಡರೆ ಈಕೆ ಸರಿಹೋಗಬಹುದೆನೋ. ಆ ಹುಡುಗನೇ ತನ್ನ ಅಳಿಯನಾದರೆ ಆಗಲಿ. ತನ್ನ ಮಗಳು ಗುಣಮುಖವಾದರೆ ಸಾಕು' ಎಂದು ತೀರ್ಮಾನವನ್ನು ಕೂಡ ಕೈಗೊಂಡಳು. ಆದರೆ ಮೆಹೆಕ್‌ಳ ಮದುವೆಯನ್ನು ಮಾಡಬೇಕಾದಲ್ಲಿ ಹಿರಿಯಳಾದ ನಜ್ಮಾಳ ಮದುವೆ ಮೊದಲು ಆಗಲೇ ಬೇಕಲ್ಲ? ಹೀಗಾಗಿ ಅವಳು ಹುಚ್ಚು ಹಿಡಿದವಳಂತೆ ಇಬ್ಬರ ಮದುವೆಯ ಸಿದ್ಧತೆಗೂ ತೊಡಗಿಕೊಂಡಳು. ತನ್ನ ಹಣ್ಣಿನ ಮಂಡಿಯ ಆದಾಯಕ್ಕೆ ಭಂಗವಾಗದಂತೆ ಮನೆ ಖರ್ಚಿಗೆ ಮತ್ತು ಮದುವೆಯ ಖರ್ಚಿಗೆಂದು ಎಷ್ಟು ಕೊಡಬಹುದೋ ಅಷ್ಟನ್ನು ಕೊಟ್ಟು ಅವಳ ಗಂಡ ಅನ್ವರ್ ನಿರ್ಲಿಪ್ತನಾಗಿ ಉಳಿದ. ಸಾಲಿಹಾ ಭೂಮಿ ಆಕಾಶವನ್ನು ಒಂದು ಮಾಡುತ್ತಾ ಒಂದೇ ಸಲ ಇಬ್ಬರು ಹೆಣ್ಣು ಮಕ್ಕಳಿಗೂ ಒಡವೆ, ಬಟ್ಟೆ ಬರೆ, ಫರ್ನಿಚರ್ ಎಲ್ಲವನ್ನು ಕೂಡಾ ಜೋಡಿಸತೊಡಗಿದಳು. ಒಂದೊಂದು ಸಾರಿ ಆಕೆಯ ಜೀವ ಹೈರಾಣಾಗಿ ಈ ಮನೆಯನ್ನಾದರೂ ಮಾರಿ ಅದರ ಹಣದಲ್ಲಿ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ಮಾಡಬಹುದೇನೋ ಎಂಬ ಆಲೋಚನೆ ಕೂಡ ಅವಳ